## ಬೇಸಿಗೆಯಲ್ಲೇಕೆ ಬಣಬಣ?

ಜೋಗ ಜಲಪಾತ 1960ಕ್ಕೂ ಮೊದಲು ಸರ್ವಋತು ಜಲಪಾತವಾಗಿತ್ತು. ಶರಾವತಿ ನದಿಗೆ ಲಿಂಗನಮಕ್ಕಿ ಅಣೆಕಟ್ಟೆ ನಿರ್ಮಾಣದ ನಂತರ ಬೇಸಿಗೆಯಲ್ಲಿ ನೀರಿನ ಕೊರತೆಯಾಗುತ್ತದೆ. ಅಣೆಕಟ್ಟೆಗೂ ಮೊದಲು ಪಶ್ಚಿಮಘಟ್ಟದಲ್ಲಿ ಹುಟ್ಟುವ ನೂರಾರು ಸಣ್ಣಸಣ್ಣ ಝರಿಗಳು ಬೇಸಿಗೆಯಲ್ಲೂ ನೀರು ಚಿಮ್ಮುತ್ತಿದ್ದವು. ಆ ನೀರು ಶರಾವತಿ ಒಡಲು ಸೇರುತ್ತಿದ್ದ ಕಾರಣ ಬೇಸಿಗೆಯಲ್ಲೂ ಜಲಪಾತದಲ್ಲಿ ನೀರು ಧುಮ್ಮಿಕ್ಕುತ್ತಿತ್ತು. ಅಣೆಕಟ್ಟೆ ನಿರ್ಮಾಣದ ನಂತರ ಜಲಪಾತ ನೀರಿಲ್ಲದೆ ಬಣಗುಡುತ್ತಿದೆ.

ಜಲ ವಿದ್ಯುತ್ ಉತ್ಪಾದನೆಗೆ ಬಳಕೆಯಾದ ನೀರು ಜಲಪಾತ ಪ್ರದೇಶದಿಂದ ಮುಂದೆ ಮತ್ತೆ ಶರಾವತಿ ನದಿ ಸೇರುತ್ತದೆ. ಹಾಗಾಗಿ, ಜಲಪಾತ ನೀರಿಲ್ಲದೆ ಕಳೆಗುಂದುತ್ತದೆ. ವಿದ್ಯುತ್ ಉತ್ಪಾದನೆಗೆ ಬಳಸಿ, ಜಲಪಾತದಿಂದ ಮುಂದೆ ಹರಿಸುವ ಈ ಜಲರಾಶಿಯನ್ನೇ ಪುನಃ ಪಂಪ್ ಮಾಡಿ, ಜಲಪಾತದ ಮೂಲಕ ವರ್ಷದ 365 ದಿನವೂ ಹರಿಸುವ ಹೊಸ ಯೋಜನೆ ಈಚೆಗಷ್ಟೇ ರೂಪುಗೊಂಡಿದೆ. ಈ ಯೋಜನೆ ಸಾಕಾರಗೊಳಿಸಿ, ವರ್ಷದುದ್ದಕ್ಕೂ ಪ್ರವಾಸಿಗರನ್ನು ಸೆಳೆಯಲು ಮಲೇಷ್ಯಾ ಮತ್ತು ದುಬೈನ ಕೆಲವು ಕಂಪೆನಿಗಳು ಮುಂದೆ ಬಂದಿವೆ.

ದುಬೈ ಉದ್ಯಮಿ, ದಕ್ಷಿಣ ಕನ್ನಡದ ಬಿ.ಆರ್.ಶೆಟ್ಟಿ ಅವರು ಕರ್ನಾಟಕದ ಪ್ರವಾಸೋದ್ಯಮ ಅಭಿವೃದ್ಧಿಗೆ ₹ 2 ಸಾವಿರ ಕೋಟಿ ಹೂಡಿಕೆ ಮಾಡಲು ಮುಂದಾಗಿದ್ದರು. ಅದರಲ್ಲಿ ಹೆಚ್ಚಿನ ಪಾಲು ಜೋಗ ಹಾಗೂ ಅದರ ಸುತ್ತಲ ಪ್ರದೇಶದ ಅಭಿವೃದ್ಧಿಗೆ ವಿನಿಯೋಗಿಸಲು ಸರ್ಕಾರದ ಮುಂದೆ ಪ್ರಸ್ತಾವ ಸಲ್ಲಿಸಿದ್ದರು. ಆದರೆ, ಅದು ಇನ್ನೂ ಮಾತುಕತೆಯ ಹಂತದಲ್ಲೇ ಇದೆ.

## 365 ದಿನವೂ ನೀರು ಹೇಗೆ?

ಜಲಪಾತದ ಮೇಲ್ಭಾಗದ ಸೀತಾಕಟ್ಟೆ ಸೇತುವೆ ಬಳಿ ಹಾಗೂ ಜಲಪಾತದ ಕೆಳಭಾಗದಲ್ಲಿ ಶರಾವತಿ ವಿದ್ಯುದಾಗಾರದ ಸಮೀಪ ಸಣ್ಣಸಣ್ಣ ಬ್ಯಾರೇಜ್ ನಿರ್ಮಿಸಲಾಗುತ್ತದೆ. ಕೆಳಭಾಗದಲ್ಲಿ ಜಲವಿದ್ಯುತ್ ಉತ್ಪಾದನಾ ಕೇಂದ್ರ ಆರಂಭಿಸಿ, ಅಲ್ಲೇ ಉತ್ಪಾದಿಸಿದ ವಿದ್ಯುತ್ ಬಳಸಿ ಜಲಪಾತದ ಮೇಲ್ಭಾಗಕ್ಕೆ ನೀರನ್ನು ಪಂಪ್ ಮಾಡಲಾಗುತ್ತದೆ. ಪ್ರತಿದಿನ ರಾತ್ರಿ ಸಮಯದಲ್ಲಿ ಈ ರೀತಿ ಪಂಪ್ ಮಾಡಿ ಸೀತಾಕಟ್ಟೆ ಸೇತುವೆ ಬಳಿ ಸಂಗ್ರಹಿಸಿದ ನೀರನ್ನು ನಿತ್ಯ ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ಜಲಪಾತದ ಮೂಲಕ ಹರಿಸಲಾಗುತ್ತದೆ.

## ಸೌಲಭ್ಯಗಳ ಕೊರತೆ

ಜೋಗ ಜಲಪಾತ ವೀಕ್ಷಣೆಗೆ ಎದುರು ಭಾಗದ ಸಮಾನಾಂತರ ಪ್ರದೇಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಲ್ಲಿ ಬಿಟ್ಟರೆ ಜಲಪಾತ ವೀಕ್ಷಣೆಗೆ ಅಂತಹ ಅವಕಾಶಗಳೇ ಇಲ್ಲ. ಕೆಲವು ಅವಘಡಗಳ ನಂತರ ಜಲಪಾತದ ಕೆಳಗೆ ಇಳಿಯಲೂ ಸಾರ್ವಜನಿಕರ ಪ್ರವೇಶ ನಿರಾಕರಿಸಲಾಗಿದೆ. ಜಲಪಾತದಿಂದ ಚಿಮ್ಮುವ ನೀರಿಗೆ ಅಲ್ಲಿನ ಬಂಡೆಗಳೆಲ್ಲ ತೋಯ್ದು ಪಾಚಿ ಕಟ್ಟಿರುತ್ತವೆ. ಕೆಳಗೆ ಇಳಿಯುವ ಪ್ರವಾಸಿಗರು ಬಂಡೆ ಏರಲು ಹೋಗಿ ಜಾರಿ ಬಿದ್ದು ಅನಾಹುತ ಮಾಡಿಕೊಳ್ಳುತ್ತಿದ್ದರು.

ಜೋಗಕ್ಕೆ ಆಗಮಿಸುವ ಗಣ್ಯರಿಗೆ, ಪ್ರವಾಸಿಗರಿಗೆ ಉಳಿಯಲು ಬೆರಳೆಣಿಕೆಯಷ್ಟು ವಸತಿ ಗೃಹಗಳಿವೆ.

ಜಲಪಾತದ ಹಿಂಭಾಗ ಉತ್ತರ ಕನ್ನಡ ಜಿಲ್ಲೆಗೆ ಸೇರಿದ ಜಾಗದಲ್ಲಿ ನೂರು ವರ್ಷಗಳ ಹಿಂದೆ ಕಟ್ಟಿಸಿದ 'ಬ್ರಿಟಿಷ್ ಬಂಗಲೆ' ಜಲಪಾತದ ಎದುರು ಲೋಕೋಪಯೋಗಿ ಇಲಾಖೆಗೆ ಸೇರಿದ ಎರಡು ನಿರೀಕ್ಷಣಾ ಮಂದಿರಗಳಿವೆ. ಈ ಎರಡೂ ಬಂಗಲೆ ಜನಪ್ರತಿನಿಧಿಗಳು ಹಾಗೂ ಗಣ್ಯರಿಗೆ ಮೀಸಲು.

ಕೆಪಿಸಿ ನಿರ್ಮಿಸಿದ ಮೈಸೂರು ಬಂಗಲೆ ಇಂಧನ ಇಲಾಖೆಯ ಅಧಿಕಾರಿಗಳಿಗೆ ಮೀಸಲು. ಇನ್ನು ಉಳಿಯುವುದು ಪ್ರವಾಸೋದ್ಯಮ ಇಲಾಖೆ ಅಧೀನದ 'ಮಯೂರ' ಹೋಟೆಲ್. ಇದು ಸಾರ್ವಜನಿಕರಿಗೆ



## ಒನಕೆ ಅಬ್ಬಿ ಫಾಲ್ಸ್

ಜೋಗ ಜಲಪಾತ ಹೊರತುಪಡಿಸಿದರೆ ಶಿವಮೊಗ್ಗ ಜಿಲ್ಲೆಯ ಸುಂದರ ಜಲಪಾತಗಳಲ್ಲಿ ಒನಕೆ ಅಬ್ಬಿ ಫಾಲ್ಸ್ ಮನಸ್ಸಿಗೆ ಮುದ ನೀಡುವ ಜಲಪಾತ.

ಆಗುಂಬೆಯಿಂದ 5 ಕಿ.ಮೀ. ದೂರದಲ್ಲಿ ಜಲಪಾತವಿದೆ. ಆಗುಂಬೆ– ಉಡುಪಿ ಮಾರ್ಗದಲ್ಲಿ ಹೋಗಿ, ಸೂರ್ಯಾಸ್ತ ವೀಕ್ಷಣೆಯ ಸ್ಥಳಕ್ಕೂ ಮೊದಲು ಮುಖ್ಯರಸ್ತೆಯಿಂದ ಬಲಕ್ಕೆ ತಿರುಗಿದರೆ 4 ಕಿ.ಮೀ ಅಂತರದಲ್ಲಿ ಈ ಜಲಪಾತವಿದೆ. ಮುಖ್ಯರಸ್ತೆಯ ಗೇಟ್ ಬಳಿಯೇ ವಾಹನ ನಿಲ್ಲಿಸಿ, ಕಾಲುದಾರಿಯಲ್ಲಿ ನಡೆದುಕೊಂಡೇ ಅಲ್ಲಿಗೆ ಸಾಗಬೇಕು. ಶಿವಮೊಗ್ಗದಿಂದ 98 ಕಿ.ಮೀ. ತೀರ್ಥಹಳ್ಳಿಯಿಂದ 38 ಕಿ.ಮೀ ದೂರವಿದೆ.

ಪಶ್ಚಿಮ ಘಟ್ಟದ ನಿತ್ಯ ಹರಿದ್ವರ್ಣದ ಕಾಡಿನ ರಮಣೀಯ ಪರಿಸರದಲ್ಲಿ 400 ಅಡಿ ಎತ್ತರದಿಂದ ಧುಮುಕುವ ಈ ಜಲಪಾತ ನೋಡಲು ಅತಿ ಸುಂದರ. ಜಲಪಾತದ ಮೇಲ್ಭಾಗದಲ್ಲಿ ನಿಂತು ಕರಾವಳಿ ಪ್ರದೇಶವನ್ನೂ ವೀಕ್ಷಿಸಬಹುದು.

ಎತ್ತರದ ಬೆಟ್ಟದ ತುದಿಯಿಂದ ಚಾಚಿದ ಬೃಹತ್ ಬಂಡೆಯ ಮೇಲಿನಿಂದ ನೇರವಾಗಿ 250 ಅಡಿಗೂ ಕೆಳಗಿರುವ ಮತ್ತೊಂದು ಬಂಡೆಯ ಮೇಲೆ ನೀರು ಬೀಳುತ್ತದೆ. ಈ ದೃಶ್ಯ ಧಾನ್ಯ ಕುಟ್ಟಲು ಬಳಸುವ ಒನಕೆಯಂತೆ ಗೋಚರಿಸುವ ಕಾರಣ ಈ ಜಲಪಾತಕ್ಕೆ ಒನಕೆ ಅಬ್ಬಿ ಎಂದು ಜನ ಕರೆಯುತ್ತಾರೆ.

ಮಳೆಕಾಡಿನ ನಡುವೆ ಇರುವ ಈ ಜಲಪಾತ ಮಳೆಗಾಲದಲ್ಲಿ ಭೋರ್ಗರೆಯುತ್ತದೆ. ಬೇಸಿಗೆಯಲ್ಲಿ ಕಳೆಗುಂದುತ್ತದೆ. ಜಲಪಾತ ವೀಕ್ಷಣೆಗೆ ಅಕ್ಟೋಬರ್‌ನಿಂದ ಜನವರಿ ಮಧ್ಯದ ಅವಧಿ ಸೂಕ್ತ. ಕಡಿದಾದ ಪ್ರದೇಶದಲ್ಲಿ ಜಲಪಾತದ ಬಳಿಗೆ ಸಾಗಬೇಕಿರುವ ಕಾರಣ ಪ್ರವಾಸಿಗರು ಸಾಕಷ್ಟು ಎಚ್ಚರ ವಹಿಸಬೇಕು.

ನಕ್ಸಲ್ ಭೀತಿ: ಈ ಜಲಪಾತ ನಕ್ಸಲ್ ಪ್ರಭಾವ ಹೊಂದಿರುವ ಪ್ರದೇಶದಲ್ಲಿ ಇರುವ ಕಾರಣ ಈಚಿನ ವರ್ಷಗಳಲ್ಲಿ ಪ್ರವಾಸಿಗರ ಸಂಖ್ಯೆ ಸಾಕಷ್ಟು ಇಳಿಮುಖವಾಗಿದೆ. ಅಲ್ಲಿಗೆ ತೆರಳುವ ಮುನ್ನ ಅರಣ್ಯ, ಇಲ್ಲವೇ, ಪೊಲೀಸ್ ಇಲಾಖೆಯ ಗಮನಕ್ಕೆ ತರಬೇಕಿದೆ.